# Naavu Havyakaru, Idu Namma Havyaka Sangha

**Dr. Kusum Bhat, Pleasant Hill, CA**

## ನಾವು ಹವೀಕರು, ಇದು ನಮ್ಮ ಹವ್ಯಕ ಸಂಘ

ಡಾ. ಕುಸುಮ್ ಭಟ್ಟ್, ಪ್ಲಸಂಟ್ ಹಿಲ್ಲ್, ಕೆಲಿಫ್ಪೋರ್ನಿಯ

ಡೊಳ್ಳಹೊಟ್ಟೆ ಗಣಪನ ಮನದಲಿ ಭಜಿಸಿ
ಹವೀಕ ಭಾಷೆಯ ಜೊತೆಯಲಿ ಇರಿಸಿ
ತಪ್ಪುಗಳಿದ್ದರೆ ನೀವ್ಗಳು ಕ್ಷಮಿಸಿ
ನಡೆದು ಬಂದಿಹ ದಾರಿಯ ತಿಳಿಸಿ

ಒಂದುಸಾವಿರದ ಒಂಬೈನೂರ
ಯಂಬೊತ್ತೊಂದನೆ ಇಸವಿಯಲಿ
ಭಟ್ಟರು ಹೊಸಮನೆ ಧ್ರುವತಾರೆಯರು
ಒಟ್ಟಿಗೆ ಹಲವರು ಹಿತಚಿಂತಕರು
ಹಗೀರ ಮಕ್ಕಳ ಪ್ರೋಷಣೆಗಾಗಿ
ಕೂಡಿ ನಲಿಯುವ ಸಂತಸಕಾಗಿ
ತಾಯಿ ನಾಡಿನ ಬಂದನಾಡಿನ
ಬಂದನ ಬಿಗಿ ಮಾಡಲಿಕಾಗಿ

ಭಟ್ಟರು ಬೆಳಗಜೆ ಅವಧಾನಿಗಳು
ಕಂಜರಪಾಣಿಯು ಮೊದಲಾಗಿ
ಹವೀಕ ಸಂಘದ ಪ್ರೆಸಿಡೆಂಟುಗಳು
ನಡೆದುಬಂದ ಈ ದಿನಗಳಲಿ
ಒಂದೇ ಹಗ್ಗದ ದಾರವಿದಂತೆ
ಗಟ್ಟೀ ನೇಯ್ದಿಹ ಪಂಜಿಯೆದಂತೆ
ಒಬ್ಬರಿಗೊಬ್ಬರು ನೆರವಾಗಲೆಂದೆ
ಕಟ್ಟೀದ ಸಂಘವು ಇದು ನಮ್ಮದಂತೆ

ಅಹಿಶ್ಚೈತ್ರವು ಮೂಲವೆಂದರು
ಮಯೂರ ಶರ್ಮನು ಕಾರಣವೆಂದರು
ಗೋಕರ್ಣ ಕ್ಷೇತ್ರವು ಶ್ರೇಷ್ಟವೆಂದರು
ಗೋರಾಷ್ಟ್ರ ದೇಷವು ನಮ್ಮದೆಂದರು
ಯಜ್ನ ಯಾಗಾದಿಯ ಮಾಡುವರೆಂದರು
ಹವಿತ್ತು ಪಡೆದರೆ ಹವ್ಯಕರೆಂದರು
ವೇದ ಪುರಾಣವ ತಿಳಿದು ನಿಂದರು
ಬ್ರಾಹ್ಮಣ ಜಾತಿಯ ಶೇಷ್ಟರೆಂದರು

ತುಂಬ ವಿಶೇಷವು ನಮ್ಮ ಜಾತಿಯು
ಶಂಕರಚಾರ್ಯರ ಹಿಂಬಾಲಕರು
ಸ್ವರ್ಣವಲ್ಲಿಯು ಚಂದ್ರ(ರಾಮ) ಪುರವು
ನಮ್ಮ ನೆಚ್ಚಿನ ಗುರುಕುಲವು

ಉಪಚಾರದಲಿ ನಾವ್ಗಳು ಮುಂದೆ
ಊಟಕೆ ಕರೆದರೆ ಎಂದೂ ಬಂದೆ
ಅನ್ನದಾನದಲಿ ಇನ್ನೂ ಮುಂದೆ
ಸಾತ್ವಿಕ ಗುಣವನು ನಡೆಸಿ ತಾನಿಂದೆ

ಮೇಲಾರ ಕೊದಿಲು ತಂಬಳಿ ಹಶಿಯು
ಕಾಯರಸ ಪ್ಪೋಳ್ದವು ಅಪ್ಪೆಹುಳಿಯು
ತೊಡೆದೆವು ತೆಳ್ಳೆವು ಸುಟ್ಟೆವುಗಳು
ಕಾಯಿವಡೆ ಚಕ್ಕುಲಿ ಯೆರೆಯೇವುಗಳು
ಭಾಷೆಯು ವಿಶೇಷ ರುಚಿಯದು ಶ್ರೇಷ್ಟ
ಆರೊಗ್ಯ ಭಾಗ್ಯಕೆ ಮಾಡಿದ ಊಟ
ಕಾಲ ಕಾಲಕೆ ತಕ್ಕಾದ ಪದಾರ್ಥ
ಸಹಜ ಬಾಳಿಗೆ ಇನ್ನೇನಿದೆ ಕಷ್ಟ

ಅಲ್ದಡ ಹವ್ವಡ ಏನೆ ಎಂದರು
ನಮ್ಮವರೆಂದರೆ ಹೆಮ್ಮೆ ಎಂದರು
ದೇಷ ವಿದೇಶದಿ ನೆಲೆಸಿ ನಿಂದರು
ಅವಯಂ ಬೇಕಾದವನೆಂದೆಂದರು
ಎಲ್ಲ ದೇವರಿಗೂ ನಾವು ಬಾಗಿದೆವು
ಸ್ಮಾರ್ಥ ಜಾತಿಯಲಿ ಉಚ್ಚರೆನಿಸಿದೆವು
ತಾಳ್ಮೆ ಸೌಹಾರ್ದದಿ ಎತ್ತಿದ ಕೈ
ಹಾನಿ ಮಾಡದಿಹ ಸಾತ್ವಿಕರೆನ್ನಿ

ಅಡಿಕೆ ತೋಟದ ಬ್ರಾಹ್ಮಣ ಮಕ್ಕಳು
ಬುದ್ಧಿಜೀವಿಗಳು ನಮ್ಮ ಜನ
ಯಮ್ಮನೆ ಮಾಣಿ ಯಂಗಳ ಕೂಸು
ಹೇಳಿರೆ ಹೆಮ್ಮೆಲೆ ನಂಬುವ ನಮ್ಮ ಜನ

ಇಲ್ಲಾದರು ಇರು ಎಲ್ಲಾದರು ಇರು
ಹವ್ಯಕನಾಗಿರು ಮಾಣಿ ಬಿಲ
ವಿವೇಕ ಉಳಿಸಿಕೊ ಬ್ರಾಹ್ಮಣ ನೀ ಮಿನ್ಯಾ
ಕರುಣಿಸು ಮಂಗಳ ಕುಸುಮಪರ